‘ಮೀನ್ ತಲಿ ತಿಂದೋರ್ ಮಾತ್ರ ಚುರುಕು ಅಂತ ತಿಳ್ಕೋಬ್ಯಾಡಲೇ’ ಅಂದಳು. ಅವನು ನಕ್ಕ. ಅವಳೂ ನಕ್ಕಳು. ಹೊರಡು ಅನ್ನುವಂತೆ ಸನ್ನೆ ಮಾಡಿದ. ಸುಮಿ ದೋಣಿ ನದಿ ಮಧ್ಯಕ್ಕೆ ಹೋಗುವವರೆಗೂ ಕಾದು, ಮಂಡಿನೀರ ಆಳದವರೆಗೆ ನದಿಯಲ್ಲಿಳಿದು ಬಗ್ಗಿ ‘ಐ ಲೈಕ್ ಯು ಪ್ರೀತ್’ ಅಂದಳು. ನೀರ ಪಾತಳಿಯಲ್ಲಿ ಚಲಿಸಿದ ಧ್ವನಿ ಅವನಿಗೆ ತಲುಪಿತು. ಅವಳು ಪ್ರೀತ್ ಎಂದದ್ದು ಅವನಿಗೆ ಆಪ್ತವೆನಿಸಿತು. ‘ಐ ಲವ್ಯೂ ಅನ್ನೋ ಆಸೆ... ಆದರೆ ನೀನು ಖುಶಿಯಿಂದ ಎದೆಗಿದಿ ಒಡೆದುಕೊಂಡಿ ಅಂತ ಅದನ್ನು ಪೋಸ್ಟ್ ಪೋನ್ ಮಾಡಿನಿ’ ಅಂದಳು.

ಅದು ಅವನಿಗೆ ಕೇಳಿಸಿತೋ ಇಲ್ಲವೋ. ಅವಳು ಅಷ್ಟು ದೂರ ಹೋದ ಮೇಲೆ ಏನೋ ನೆನಪಾದವನ ಹಾಗೆ ಅವನು, ‘ನೈನ್ ಏಯ್ಟ್ ಸಿಕ್ಸ್ ನೈನ್... ಏಯ್ಟ್ ಸೆವೆನ್ ಜೀರೋ... ಫೈವ್ ಫೋರ್ ಫೈವ್’ ಅಂದ. ಅದು ಅವಳಿಗೆ ಕೇಳಿಸಿತೋ ಇಲ್ಲವೋ!

3

## ಓ ಫ್ಲಾವರ್ ಪರ್ಲ್ ಅಂಬ್ರೆಲ್ಲಾ

ಲೈಫ್ ಎಂದೂ ಇಷ್ಟು ಸುಂದರವಾಗಿ ಕಂಡಿರಲಿಲ್ಲ. ಸುಮಿ ದಿಟ್ಟ ಹುಡುಗಿ ಎಂದು ಎಲ್ಲರೂ ಹೇಳುತ್ತಿದ್ದರು. ಆದರೆ ತಾನು ಇಷ್ಟೊಂದು ಬೋಲ್ಡ್ ಆಗಿರುವೆ ಎಂಬುದು ಸುಮಿಗೆ ಕಾರವಾರಕ್ಕೆ ಬರುವವರೆಗೂ, ಅದರಲ್ಲೂ ಪಾತಿದೋಣಿ ಹುಡುಗನನ್ನು ಭೇಟಿ ಮಾಡುವವರೆಗೂ ತಿಳಿದಿರಲಿಲ್ಲ. ಅಮೂರ್ತ ನೆಲೆಯಲ್ಲಿ ಮನಸ್ಸು ಹಂಬಲಿಸುತ್ತಿದ್ದದ್ದು ಅಚಾನಾಕ್ಕಾಗಿ ಸಂಭವಿಸಿದ ವಿಸ್ಮಯದಲ್ಲಿ ಅವಳಿದ್ದಳು. ಬಿಸಿಲನಾಡಿನಲ್ಲಿ ಝರಿಯಂತೆ ಒಸರುತ್ತಿದ್ದ ಪ್ರೀತಿ ಭಾವನೆ, ಕಡಲ ತೀರದಲ್ಲಿ ಭೋರ್ಗರೆವ ಅಲೆಯಾಗಿತ್ತು. ಬಹುಶಃ ಪ್ರೇಮದ ಸೆಲೆಯೊಂದು ಶೈಲತ್ತೆಯಿಂದಲೇ ತನ್ನೊಳಗೆ ಹರಿದು ಬಂದಿರಬೇಕು. ಪ್ರೀತಿಯ ಶೈಲತ್ತೆ... ಸಮಾಜವು ನಿನ್ನ ಪ್ರೇಮವನ್ನು ಅಧೂರಾ ಆಗಿಸಿರಬಹುದು. ಆದರೆ ನೀನು ಪ್ರೇಮದ ಅಮರತ್ವವನ್ನು ತೋರಿಸಿದೆ. ಯು ಆರ್ ಗ್ರೇಟ್ ಶೈಲತ್ತೆ... ಎಂದು ಸಂದೇಶ ಬರೆದು ನೂರಾರು ಹಾರ್ಟ್ ಇಮೋಜಿಗಳನ್ನು ಕಳಿಸಿದಳು. ‘ಹುಚ್ಚಿ’ ಎಂದಳು ಶೈಲತ್ತೆ. ‘ಐ ಆಮ್ ಇನ್ ಲವ್, ರಿಯಲ್ ಲವ್. ಲವ್ ಆಟ್ ಫಸ್ಟ್ ಸೈಟ್ ಅನ್ನು ಬೇಕಾದ್ರೆ’ ಎಂದಳು.

ಶೈಲತ್ತೆಗೂ ಸಿಕ್ಕಾಪಟ್ಟೆ ಖುಶಿಯಾಗಿತ್ತು. ಘನ ಕುಟುಂಬದಲ್ಲಿ ತಾನು ಸ್ಥಾಪಿಸಿದ ಪ್ರೇಮರಾಜ್ಯಕ್ಕೆ ನೂತನ ಪಟ್ಟಾಭಿಷೇಕವಾಗುತ್ತಿರುವುದು ಅವಳನ್ನು ರೋಮಾಂಚನಗೊಳಿಸಿತ್ತು. ಹಣ, ದುಡಿತ, ಬಿಸಿನೆಸ್ಸು, ಮನೆತನ, ಮರ್ಯಾದೆ, ಸಮಾಜ, ಆಡಂಬರ, ಜಾತಿ, ಧರ್ಮ... ಜಡ ಮನಸ್ಸುಗಳೇ ಧಿಕ್ಕಾರವಿರಲಿ ಎಂದುಕೊಂಡಳು.

ತಡರಾತ್ರಿವರೆಗೂ ಎಚ್ಚರವಿದ್ದು ಸುಮಿಗೆ ‘ನನ್ನ ಪುಟ್ಟ ಮರಿ. ಪ್ರೇಮವು ನಿನ್ನ ಹೃದಯದಲ್ಲಿ ಬೆಳಕನ್ನು ಇಳಿಸಲಿ. ಆ ಬೆಳಕಿನ ಅಮೃತವನ್ನು ಮನಸಾರೆ ಕುಡಿ, ನಿನ್ನ ಹುಡುಗನಿಗೂ ಕುಡಿಸು... ಅಮರತ್ವ ಎಂಬುದು ಬೇರಿಲ್ಲ ಮಗಳೇ’ ಎಂದು ಬರೆದು ಹಾಸಿಗೆಯಲ್ಲಿ ಒರಗಿದಳು. ಕಿಟಕಿಯಿಂದ ಹಾಯಿಸಿ ಬಂದ ನಕ್ಷತ್ರಗಳ ಬೆಳಕು ಇಂದು ದಿನಕ್ಕಿಂತ ಹೆಚ್ಚೇ ಇದೆ ಅನಿಸಿತು ಅವಳಿಗೆ.

ಇತ್ತ ಪ್ರೀತಂನ ಜೋಪಡಿಗೆ ಖುದ್ದು ನಕ್ಷತ್ರಗಳೇ ಇಳಿದು ಬಂದಿದ್ದವು. ಮಿಂದು ಬಂದರೂ ಉಳಿಯುತ್ತಿದ್ದ ಎಂದಿನ ಮತ್ಸ್ಯಗಂಧಕ್ಕೆ ಬದಲಾಗಿ ಅವನ ಮೈ ಮನಸ್ಸುಗಳಲ್ಲಿ ಸುಮಿ ಘಮಘಮಿಸುತ್ತಿದ್ದಳು. ಮಗ ರಾಶಿ ಖುಶಿಯಲ್ಲಿರುವುದನ್ನು ಗಮನಿಸಿದರೂ ಅವ್ವಿ ಕಾರಣ ಕೇಳಲಿಲ್ಲ. ಗಾಳಕ್ಕೆ ಹಿಡಿದ ನಾಲ್ಕಾರು ಮೀನುಗಳಲ್ಲಿ ಸಾಕಷ್ಟು ದೊಡ್ಡಕ್ಕಿರುವ ಕೆಂಸವೂ ಇದ್ದುದ್ದರಿಂದ ಅವಳೂ ಖುಶಿಯಾಗಿದ್ದಳು. ಬೆಳಿಗ್ಗೆ ಕೊಂಡೋಗಿ ಅಮೃತ ಹೊಟೆಲಿನವರಿಗೆ ಕೊಡುವೆ, ಅವರು ಬಾಕಿಯವರಿಗಿಂತ ಹತ್ತು ರುಪೈ ಹೆಚ್ಚು ಕೊಡ್ತಾರೆ, ಎಂದು ಅದನ್ನು ಐಸ್ ಹಾಕಿದ ಮುಟ್ಟಿಯಲ್ಲಿ ಮುಚ್ಚಿಟ್ಟಳು. ಇತ್ತೀಚೆಗೆ ಮಗ ಪಾತಿದೋಣಿ ಮೇಲೆ ಕಾಳಿ ಅಳಿವೆಯಲ್ಲಿ ಮೀನು ಹಿಡಿಯಲು ಶುರು ಆದಮೇಲೆ ಅವಳಿಗೆ ಒಂದಿಷ್ಟು ದುಡ್ಡು ಕೈಯಲ್ಲಿ ಆಡುತ್ತಿತ್ತು. ಕಾಳಿ ಅಳಿವೆಯಲ್ಲಿ ಸಿಗುವ ನೊಗ್ಲಿ, ಕೆಂಸ ಇತ್ಯಾದಿ ರುಚಿರುಚಿ ಮೀನುಗಳಿಗೆ ಪಕ್ಕದ ಗೋವಾದಿಂದಲೂ ಬೇಡಿಕೆಯಿತ್ತು. ಆದರೆ ಕಲಿಯುತ್ತಿರುವ ಮಗನನ್ನು ಹಾಗೆ ಇಡೀ ದಿನ ಕೆಲಸಕ್ಕೆ ಹಚ್ಚಲು ಅವಳಿಗೆ ಮನಸ್ಸಿಲ್ಲ. ಆದರೆ ಒಂದು ಹೊತ್ತಾದರೂ ನೀರಿಗಿಳಿಯದೇ ಗತಿಯಿಲ್ಲ. ಕಾಲೇಜಿನಲ್ಲಿ ಅದಕ್ಕೆ ಇದಕ್ಕೆ ಅಂತ ದುಡ್ಡು ಕೇಳ್ತಾನೇ ಇರ್ತಾರೆ. ಮಗನ ವಯಸ್ಸಿನ ಮೀನುಗಾರ ಹುಡುಗರು ಗೋವಾ, ರತ್ನಗಿರಿ, ಮಲ್ಪೆ, ಸುರತ್ಕಲ್ ಕಡೆಗೆ ಬೋಟಿಗೆ ಹೋಗಿ ಸೀಸನ್ನಿನಲ್ಲಿ ಹಣ ಗಳಿಸಿ ಬರುತ್ತಾರೆ. ಆದರೆ ತಾನು ಮಗನನ್ನೆಂದೂ ಕಡಲಿಗೆ ಕಳಿಸುವುದಿಲ್ಲ ಎಂದು ಆಣೆ ಮಾಡಿಕೊಂಡಾಗಿದೆ.

‘ತ್ರಾಸ ಆದರೂ ಅಡ್ಡಿಲ್ಲ, ಒಣಮೀನು ಕಚ್ಚಿ ಗಂಜಿ ಉಂಡರೂ ಆಗುದು. ಆದರೆ ಮಗ, ನೀ ಮಾತ್ರ ಕಡಲಿಗಿಳಿವುದು ಬ್ಯಾಡಾ... ನಾಲ್ಕಕ್ಷರ ಕಲಿತು ಬ್ಯಾರದೇ ಭವಿಷ್ಯ ರೂಪಿಸಿಕೊ’, ಎಂದು ಅವನನ್ನು ಕಟ್ಟಿಹಾಕಿದ್ದಳು. ಆದರೆ ಕಾಳಿ ಅಳಿವೆಯಿಂದ ಕಾಣುವ ಅಬ್ಬರದ ಕಡಲು ಪ್ರೀತಂನನ್ನು ಆಕರ್ಷಿಸುತ್ತಿದ್ದದ್ದು ಮಾತ್ರ ನಿಜ. ‘ನಿನ್ನ ಅಪ್ಪ ಮಾನೇರಿ ತೆರೆಗಳನ್ನೂ ಮಣಿಸಿ, ಲೀಲಾಜಾಲವಾಗಿ ದೋಣಿ ನಡೆಸುವುದನ್ನು ಅದೇನ್ ಕೇಳುವೆ’ ಎಂದು ಆಯಿ ಮೂಡು ಬಂದಾಗ ಕತೆಮಾಡಿ ಹೇಳುತ್ತಿದ್ದರಿಂದ ಅವನ ಮನಸ್ಸಿನಲ್ಲಿ ಕಡಲ ಬಗ್ಗೆ ಸೆಳೆತವೊಂದು ಇದ್ದದ್ದು ಸುಳ್ಳಲ್ಲ. ಅಂಥ ಸೆಳೆತದಲ್ಲೇ ಪ್ರೀತಂ ದೋಣಿಯನ್ನು ಮುನ್ನಡೆಸುತ್ತಾ ದೇವಭಾಗದವರೆಗೂ ಹೋದದ್ದುಂಟು. ಸಮುದ್ರ ಸೀಳಿದ್ದು ತೆರೆಗಳು ಉಕ್ಕೇರುವುದನ್ನು, ಸುರುಳಿಯಾಗಿ ಸುತ್ತಿ ಮರಳುವುದನ್ನು ಕಂಡಾಗ ರೋಮಾಂಚನ ಆಗಿದ್ದುಂಟು.

(ಸಶೇಷ)

## ನೀರಿನೊಳಗಿನ ಮಂಜು
### ಪ್ರತಿಕ್ರಿಯೆ

### ಸೂಕ್ಷ್ಮ, ಕುತೂಹಲಗಳ ಕಥಾಹಂದರ

‘ನೀರಿನೊಳಗಿನ ಮಂಜು’ (ಡಾ. ನಾ. ಮೊಗಸಾಲೆ) ಇದು ನಮ್ಮ ಸುತ್ತಮುತ್ತಲಿನ ಜನರ ಮತ್ತು ಘಟನೆಗಳಿಂದ ತುಂಬಿದ ಕಾದಂಬರಿ. ನಮ್ಮ ಜನ ಮತ್ತು ಇಲ್ಲಿ ನಡೆಯುತ್ತಿರುವ ಸಾಮಾನ್ಯ ಆಗುಹೋಗುಗಳನ್ನು ಲೇಖಕರು ಅತ್ಯಂತ ಆಳವಾಗಿ, ಸೂಕ್ಷ್ಮವಾಗಿ ಮತ್ತು ಕುತೂಹಲಕರವಾಗಿ ಹೆಣೆದಿದ್ದಾರೆ.

ಈಗಿನ ಮೊಬೈಲ್ ಯುಗದಿಂದ ಸ್ವಲ್ಪ ಹಿಂದಿನ ಅಂದರೆ ಈಗಿನ ತಲೆಮಾರಿಗೆ ಅನುಭವಕ್ಕೆ ಬಾರದಿರುವ ಜೀವನಶೈಲಿಯನ್ನು ಸ್ವಲ್ಪವೂ ಸಪ್ಪೆ ಆಗದಂತೆ ವಾಸ್ತವಕ್ಕೆ ಹತ್ತಿರವಾಗಿ ಬರೆದಿರುವರು. ಯಾರೂ ನಂಬದಿರುವಷ್ಟು ಕೆಟ್ಟವರೂ ಅಲ್ಲ ಅತೀ ನಂಬಿಕೆಗೆ ಅರ್ಹರೂ ಅಲ್ಲ ಎನ್ನುದನ್ನು ಸಹಜವಾಗಿ ಹೇಳಿರುವರು. ಬೌದ್ಧಿಕವಾಗಿ ಎಷ್ಟೇ ಎತ್ತರಕ್ಕೇರಿದರೂ ಆಯತ ಸಂದರ್ಭದಲ್ಲಿ ಪ್ರಕೃತಿ ಸಹಜ ಗುಣವನ್ನು ಮೆಟ್ಟಿ ನಿಲ್ಲುವಲ್ಲಿ ಎಡವುದನ್ನು ಸರಿಯಾಗಿ ಚಿತ್ರಿಸಿದ್ದಾರೆ.

ಹಳೆಯ ಕಾಲದ ಹೆಂಗಸಿನ ಪಾತ್ರಕ್ಕೆ ಸೌಮ್ಯ ಎನ್ನುವ ಹೆಸರು ಹೊಸದಾಯಿತು ಅಂತ ಅನಿಸಿತು. ಒಟ್ಟಿನಲ್ಲಿ 15 ವಾರವೂ ‘ಸುಧಾ’ಕ್ಕಾಗಿ ಕಾಯುವಂತೆ ಮಾಡುವಲ್ಲಿ ಲೇಖಕರು ಯಶಸ್ವಿ ಆಗಿದ್ದಾರೆ.

– ಶ್ಯಾಮ ಪಾರೆ

ಕಾದಂಬರಿ ತುಂಬಾ ಚೆನ್ನಾಗಿದೆ. ಈ ಧಾರಾವಾಹಿಯಲ್ಲಿ ಪ್ರಸ್ತುತ ಸಮಾಜದಲ್ಲಿನ ಹಿರಿಯರ ಮತ್ತು ಕಿರಿಯರ ಜೀವನದ ಸಮಸ್ಯೆಗಳ ಬಗ್ಗೆ ತುಂಬಾ ಸುಂದರವಾಗಿ ಬರೆದಿದ್ದಾರೆ. ಈ ತರಹದ ಧಾರಾವಾಹಿ ಬರೆದ ಲೇಖಕರಿಗೆ ಮತ್ತು ಪ್ರಕಟಿಸಿದ ಸುಧಾ ಪತ್ರಿಕೆಗೆ ನಮ್ಮ ಅಭಿನಂದನೆಗಳು.

–ಪಿ ಹೆಚ್ ಪಾಟೀಲ್, ರಾಣೆಬೆನ್ನೂರ

ಹದಿನೈದು ಕಂತುಗಳು ಚೆನ್ನಾಗಿ ಮೂಡಿ ಬಂದವು. ಡಾ. ನಾ ಮೊಗಸಾಲೆಯವರು ಶ್ರೀನಿವಾಸರಾಯರ ಪಾತ್ರದ ಮೂಲಕ ಈಗ ಚಿಕ್ಕ ಕಾರಣಗಳಿಂದ ದೂರವಾಗುವುದರ ಬಗೆಗಿನ ಆತಂಕ ತುಮುಲಗಳನ್ನು, ತಾಯಿಯ ಜವಾಬ್ದಾರಿಯುತ ಪಾತ್ರದಲ್ಲಿ ಹೇಳಿದಾರೆ. ಮನೋವೈಜ್ಞಾನಿಕ ಸಲಹೆಗಳನ್ನು ಹೇಳಿದ್ದಾರೆ. ಮೊಗಸಾಲೆಯವರ ಬರಹ ಹೀಗೆ ಸಾಗಲಿ.

– ಕಮಲಾದೇವಿ ರಾಜಶೇಖರ ಹಳೂರ್,
ಬೆಂಗಳೂರು